ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

(1)

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಮಿತಿ - ಸಾರ್ವಜನಿಕ ಲೆಕ್ಕಪತ್ರಗಳು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 7/4/21

# 19 ಅಧಿಕಾರಿಗಳು ದೋಷಮುಕ್ತ!

**ಬೆಂಗಳೂರು:** ಸರ್ಕಾರಿ ಕೇಂದ್ರ ಮುದ್ರಣಾಲಯದಲ್ಲಿ ತಪ್ಪಿತಸ್ಥರೆಂದು ಹೇಳಲಾದ 19 ಅಧಿಕಾರಿಗಳನ್ನು ದೋಷ ಮುಕ್ತಗೊಳಿಸಿ ಸರ್ಕಾರ ಹೊರಡಿಸಿರುವ ಆದೇಶ ಸಾರ್ವಜನಿಕ ಲೆಕ್ಕ ಪತ್ರ ಸಮಿತಿ (ಪಿಎಸಿ)ಯಲ್ಲಿ ತೀವ್ರ ಚರ್ಚೆಗೆ ಕಾರಣವಾಯಿತು. ಶಾಸಕ ಎ.ಟಿ.ರಾಮಸ್ವಾಮಿ ನೇತೃತ್ವದಲ್ಲಿ ನಡೆದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಭೆಯಲ್ಲಿ ವಿಷಯ ಪ್ರಸ್ತಾಪವಾಯಿತು. 2008ರಲ್ಲಿ ಸಾಮಗ್ರಿ ಖರೀದಿಯಲ್ಲಿ ಲೋಪವಾಗಿದ್ದು, 82.44 ಲಕ್ಷ ರೂ. ನಿಷ್ಫಲವಾಗಿತ್ತು ಎಂದು ಸಿಎಜಿ ವರದಿಯಲ್ಲಿ ಆಕ್ಷೇಪ ವ್ಯಕ್ತವಾಗಿತ್ತು. ತಪ್ಪಿತಸ್ತ 19 ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳೇ ವರದಿ ನೀಡಿದ್ದರು.

» **ಸರ್ಕಾರಿ ಮುದ್ರಣಾಲಯ ಅವ್ಯವಹಾರ**

» **ಪಿಎಸಿ ಸಭೆಯಲ್ಲಿ ಚರ್ಚೆ**

ಆದರೆ, ಏ.5ರಂದು ಈ 19 ಅಧಿಕಾರಿಗಳನ್ನು ದೋಷಮುಕ್ತಗೊಳಿಸಿ ಸರ್ಕಾರ ಆದೇಶ ಹೊರಡಿಸಿದ್ದು ಏಕೆ? ಎಂದು ಅಧಿಕಾರಿಗಳನ್ನು ಸಮಿತಿ ತರಾಟೆ ತೆಗೆದುಕೊಂಡಿತು. ನಿವೃತ ಐಎಎಸ್ ಅಧಿಕಾರಿ ರವಿಶಂಕರ್ ಸೇರಿ 19 ನೌಕರರ ವಿರುದ್ಧ ಕ್ರಮ ಕೈಗೊಳ್ಳದೆ ದೋಷಮುಕ್ತಗೊಳಿಸಲು ಅನುಮೋದನೆ ನೀಡಿರುವ ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ನೀಡಿರುವ ಟಿಪ್ಪಣಿಯೂ ಒಳಗೊಂಡಂತೆಪ್ರಕರಣ ಸಂಬಂಧ 15 ದಿನಗಳ ಒಳಗಾಗಿ ಸಮಗ್ರ ವರದಿ ಸಲ್ಲಿಸಲು ಶಿಕ್ಷಣ ಇಲಾಖೆಗೆ ಪಿಎಸಿ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

**ಅನುಮಾನಕ್ಕೆ ಅವಕಾಶ:** ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದ ಶಿಕ್ಷಣ ಇಲಾಖೆ ಇದ್ದಕ್ಕಿದ್ದಂತೆಯೇ ತನ್ನ ಹಂತದಲ್ಲೇ ದೋಷಮುಕ್ತ ಗೊಳಿಸಿರುವುದು ಅನುಮಾನಕ್ಕೆ ಇಂಬು ಮಾಡಿಕೊಟ್ಟಿದೆ. ನಿವೃತ್ತ ನಿರ್ದೇಶಕ ಎಂ.ರವಿಶಂಕರ್, ಬಿ.ಪಿ.ಶಾಂತಾನಂದ, ಬಿ.ಎನ್.ಟಿ.ಗೌಡ, ಲಕ್ಷ್ಮಣ ಸ್ವಾಮಿ, ಕೋಕಿಲಾ, ಗಜೇಂದ್ರ, ನಾಗಮಹೇಶ್, ಎಂ.ರೂಪ, ಆರ್.ಮಂಜುನಾಥ್ ಸೇರಿ 19 ಮಂದಿಯನ್ನು ದೋಷ ಮುಕ್ತಗೊಳಿಸಲಾಗಿದೆ.

## ಕಂಪ್ಯೂಟರ್ ಖರೀದಿ ಅವ್ಯವಹಾರ

ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ನೀಡುವ ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆ ಜಾರಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರವೂ ಚರ್ಚೆಗೆ ಒಳಪಟ್ಟಿತು. 2010ರಲ್ಲಿ ಕಂಪ್ಯೂಟರ್ ಶಿಕ್ಷಣಕ್ಕೆ 426 ಕೋಟಿ ರೂ. ಮೊತ್ತದಲ್ಲಿ ಪರಿಕರ ಖರೀದಿಸಲಾಗಿತ್ತು. ಆದರೆ, ಯಾವ ಶಾಲೆಗೆ ಯಾವ ಪರಿಕರಗಳಿರಬೇಕು ಎಂಬ ಸ್ಪಷ್ಟತೆಯಾಗಲಿ, ಯೋಜನಾ ವರದಿಯಾಗಲಿ ಇರಲಿಲ್ಲ. ಇದರಲ್ಲಿ ₹89.52 ಕೋಟಿ ಅವ್ಯವಹಾರವಾಗಿದೆ ಎಂಬ ವಿಚಾರ ಚರ್ಚೆ ಯಾಗಿ 15 ದಿನದಲ್ಲಿ ಸಮಗ್ರ ವರದಿ ಸಲ್ಲಿಸಲು ಸಮಿತಿ ಸೂಚಿಸಿದೆ.